**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ನಂಜನಗೂಡು**

**ಸಿಸಿ ಸಂಖ್ಯೆ: 3376/2025**

**ಫಿರ್ಯಾದುದಾರರು** : ಸರ್ಕಾರದ ಪರವಾಗಿ ಆರಕ್ಷಕ ಉಪ-ನಿರೀಕ್ಷಕರು,
ಹುಲ್ಲಹಳ್ಳಿ ಪೊಲೀಸ್ ಠಾಣೆ, ನಂಜನಗೂಡು.

ವಿರುದ್ಧ

**ಆರೋಪಿ** : ಶ್ರೀ.ಸಿದ್ದರಾಜು

:: **ಆಪಾದನೆ** ::

**ಶ್ರೀ ಸತೀಶ. ಕೆ.ಜಿ. ಬಿ.ಎ., ಎಲ್.ಎಲ್.ಬಿ.,** ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿಯಾದಃ-

ಶ್ರೀ.ಸಿದ್ದರಾಜು ಬಿನ್ ಗುರುಮಲ್ಲಯ್ಯ
ವಯಸ್ಸು ಸುಮಾರು 28 ವರ್ಷ,
ವಾಸಃ ಕಲ್ಲಂಬಾಳು ಗ್ರಾಮ,
ಹೆಚ್ ಡಿ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ.

ನಿವಾಸಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ದಿನಾಂಕ 26.04.2024 ರಂದು ಸಂಜೆ 04-30 ಗಂಟೆ ಸಮಯದಲ್ಲಿ ಹುಲ್ಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಶ್ರೀ.ನಂಜುಂಡಪ್ಪರವರ ಜಮೀನಿನ ಬಳಿ ಕಲ್ಲಂಬಾಳು - ಜಾಲಹಳ್ಳಿ ಗ್ರಾಮದ ಕಡೆ ಹಾದುಹೋಗಿರುವ ಕಚ್ಚಾ ರಸ್ತೆಯಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತು KA-10 E-5278 ರ ರಾಯಲ್ ಎನ್ ಫೀಲ್ಡ್ ಬೈಕ್ ನ ಹಿಂಭಾಗದಲ್ಲಿ ಚಾಸಾ-1 ಶ್ರೀ.ಚಂದ್ರು ರವರನ್ನು ಕೂರಿಸಿಕೊಂಡು ಕಲ್ಲಂಬಾಳು ಕಡೆಯಿಂದ ಜಾಲಹಳ್ಳಿ ಕಡೆಗೆ ಅತಿವೇಗ, ಅಜಾಗರೂಕತೆ ಮತ್ತು ನಿರ್ಲಕ್ಷ್ಯತೆಯಿಂದ ಮಾನವ ಜೀವಕ್ಕೆ ಅಪಾಯವುಂಟು ಮಾಡುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಬೈಕ್ ನಿಯಂತ್ರಿಸಲಾಗದೆ ಕೆಳಗಡೆ ಬಿದ್ದು ಅಪಘಾತಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ-279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತು KA-10 E-5278 ರ ರಾಯಲ್ ಎನ್ ಫೀಲ್ಡ್

ಬೈಕ್ ನ ಹಿಂಭಾಗದಲ್ಲಿ ಚಾಸಾ-1 ಶ್ರೀ.ಚಂದ್ರು ರವರನ್ನು ಕೂರಿಸಿಕೊಂಡು ಕಲ್ಲಂಬಾಳು ಕಡೆಯಿಂದ ಜಾಲಹಳ್ಳಿ ಕಡೆಗೆ ಅತಿವೇಗ, ಅಜಾಗರೂಕತೆ ಮತ್ತು ನಿರ್ಲಕ್ಷ್ಯತೆಯಿಂದ ಮಾನವ ಜೀವಕ್ಕೆ ಅಪಾಯವುಂಟು ಮಾಡುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಬೈಕ್ ನಿಯಂತ್ರಿಸಲಾಗದೆ ಕೆಳಗಡೆ ಬಿದ್ದು ಅಪಘಾತಪಡಿಸಿದ ಪರಿಣಾಮ, ಚಾಸಾ-1 ರವರ ತಲೆ, ತೋಳು, ಎಡಮಂಡಿ, ಎಡಗಣ್ಣಿನ ಬಳಿ ತೀವ್ರ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ-338 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಪ್ರಶ್ನೆ:1- ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನೆಯನ್ನು ಅರ್ಥಮಾಡಿಕೊಂಡಿರುವಿರಾ?

ಆರೋಪಿಯ ಉತ್ತರಃ

ಪ್ರಶ್ನೆ:2- ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

(ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ಆಪಾದನೆಯನ್ನು ಓದಿ ತಿಳಿಸಿ ಹೇಳಲಾಗಿ ಸದರಿ ಆರೋಪಿಯು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತ್ತೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ 12.03.2026

(ಸತೀಶ. ಕೆ.ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ನಂಜನಗೂಡು.

cc 3376/2025

Accused is present.

Charge sheet has been supplied to the counsel for Accused

Ld. defence counsel Sri. AKM has filed vakalath for accused.

The accused submits that, he is ready to plead guilty of the offences alleged against him. Hence, plea of the offences U/s.279 and 338 of I.P.C is recorded and the same is read over to the accused and he voluntarily pleads guilty. I accept the plea of the accused and proceed to pass the following:

**ORDER**

Acting U/s.252 of Cr.P.C., the accused is convicted for the offences punishable U/s.279 and 338 of IPC and he is sentenced him to pay a fine of Rs.1,000/- (Rupees One Thousand only) for the offence punishable U/s.279 of I.P.C. In default of payment of fine, he shall undergo simple imprisonment for a period of 05 days.

Further, accused is sentenced to pay a fine of Rs.1,000/- (Rupees One Thousand only) for the offence punishable U/s.338 of I.P.C. In default of payment of fine, he shall undergo simple imprisonment for a period of 05 days.

Interim custody of vehicle is hereby made absolute.

For F/orders. Call on 14.03.2026.

Prl.Civil Judge & JMFC.,
Nanjangud.